ಬರೆಯುತ್ತಿರುವ 'ಸಿಪ' ಅವರು, ಕಳೆದ ಐದಾರು ವರ್ಷಗಳಲ್ಲಿ ವರ್ಷಕ್ಕೊಂದು ಕವನಸಂಕಲನ ಹೊರತರುತ್ತಿದ್ದಾರೆ ಎಂದರೆ ಅವರ ಬರವಣಿಗೆಯ ಶಕ್ತಿ ಎಂಥದ್ದು ಎಂಬುದರ ಕಲ್ಪನೆಯಾದೀತು. ಬಹುತೇಕ ಸಾಹಿತಿಗಳಿಗೆ ಇಳಿವಯಸ್ಸಿನಲ್ಲಿ ಬರವಣಿಗೆಯ ನಿರಂತರತೆಯನ್ನು ಕಾಯ್ದುಕೊಳ್ಳುವುದು ಕಷ್ಟದ ಕೆಲಸ. ಹಿಂದೆ ಬರೆದದ್ದನ್ನೇ ಮರುಮುದ್ರಣ ಮಾಡುವುದು, ಸಮಗ್ರ ಸಾಹಿತ್ಯ ಪ್ರಕಟಿಸುವುದು, ಆಯ್ದ ಸಾಹಿತ್ಯಕ್ಕೆ ಮರುಜೀವ ನೀಡುವುದು, ಮುಂತಾದವುಗಳನ್ನು ಹಿರಿಯ ಸಾಹಿತಿಗಳು ಮಾಡಲು ಸಾಧ್ಯವಾಗಬಹುದು. ಆದರೆ 'ಸಿಪ' ಅವರು, ಕಾವ್ಯವೂ ಸೇರಿದಂತೆ ಹಲವು ಪ್ರಕಾರಗಳಲ್ಲಿ ಇಂದಿಗೂ ಹೊಸದಾಗಿ ಬರೆಯುವ ಉತ್ಸಾಹ ಉಳಿಸಿಕೊಂಡಿದ್ದಾರೆ.

ಪಟ್ಟಣಶೆಟ್ಟರಿಂದ ಶಿಕ್ಷಣ ಸಂಸ್ಕಾರವನ್ನು ಪಡೆದ ಅನೇಕಾನೇಕ ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ಕಟ್ಟಿಕೊಂಡು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ. ಈ ನಿಟ್ಟಿನಲ್ಲಿ ಧರಣೇಂದ್ರ ಕುರಕುರಿ, ಕುಲಸಚಿವರಾದ ನಾಮದೇವಗೌಡ, ದಯಾನಂದ ಅಲ್ಲಾಪೂರ, ಮಕಾನದಾರ್ ಮುಂತಾದವರನ್ನು ಹೆಸರಿಸಬಹುದು. ಇಂದಿಗೂ ಅವರೊಂದಿಗೆ ಒಡನಾಟ ಇಟ್ಟುಕೊಂಡಿರುವ ಶಿಷ್ಯಬಳಗ ದೊಡ್ಡದಿದೆ.

ಸಿದ್ಧಲಿಂಗ ಪಟ್ಟಣಶೆಟ್ಟಿ, ಗಿರಡ್ಡಿ ಗೋವಿಂದರಾಜ ಮತ್ತು ಚಂದ್ರಶೇಖರ ಪಾಟೀಲರು 1964ರಲ್ಲಿ ಪ್ರಾರಂಭಿಸಿದ 'ಸಂಕ್ರಮಣ' ಸಾಹಿತ್ಯ ಪತ್ರಿಕೆಗೆ ಕರ್ನಾಟಕದ ಪತ್ರಿಕಾ ಇತಿಹಾಸದಲ್ಲಿಯೇ ವಿಶಿಷ್ಟ ಸ್ಥಾನವಿದೆ. ಕರ್ನಾಟಕದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಬದುಕಿನ ಅಧಿಕಾರಯುತ ದಾಖಲೆಯಾಗಿ ಆ ಪತ್ರಿಕೆ ನಡೆದುಬಂದಿದೆ. ಹಿಂದಿನ ಮತ್ತು ಇಂದಿನ ಅನೇಕ ಬರಹಗಾರರಿಗೆ ವೇದಿಕೆ ಒದಗಿಸಿದೆ. ಬಹುತೇಕ ಖ್ಯಾತನಾಮರು ಸಂಕ್ರಮಣಕ್ಕೆ ಬರೆದಿದ್ದಾರೆ.

'ಸಂಕ್ರಮಣ' ಪತ್ರಿಕೆ ಪ್ರಾರಂಭವಾಗಿ ಒಂದು ದಶಕ ಕಳೆದು, ಸಾಕಷ್ಟು ಹೆಸರನ್ನು ಮಾಡಿತ್ತು. ಅದೇ ಸಂದರ್ಭದಲ್ಲಿ ಮೈಸೂರಿನಲ್ಲಿ 'ವೈದಿಕ ವಿರೋಧಿ ಬರಹಗಾರರ ಸಮಾವೇಶ' ನಡೆಯಿತು. ಕುವೆಂಪು, ತೇಜಸ್ವಿ, ಲಂಕೇಶ, ರಾಮದಾಸ, ನಂಜುಂಡಸ್ವಾಮಿ, ವಿಶುಕುಮಾರ್ ಮುಂತಾದ ಖ್ಯಾತನಾಮರು ಭಾಗವಹಿಸಿದ್ದ ಕಾರ್ಯಕ್ರಮವನ್ನು ಸಿದ್ಧಲಿಂಗ ಪಟ್ಟಣಶೆಟ್ಟರು ನಿರೂಪಿಸಿ, ನಿರ್ವಹಿಸಿದ್ದರು. ಆ ಕಾರ್ಯಕ್ರಮವನ್ನು ಆಯೋಜಿಸಿದ್ದ ಒಕ್ಕೂಟದ ವಿರುದ್ಧ ಶಿವರಾಮ ಕಾರಂತರು ವಕೀಲಿ ನೋಟಿಸನ್ನು ಕೊಟ್ಟಿದ್ದರು. ಅದಕ್ಕೆ ಪ್ರೊ. ನಂಜುಂಡಸ್ವಾಮಿಯವರು ಉತ್ತರವನ್ನು ಕೊಟ್ಟಿದ್ದರು. ಮುಂದೆ ನಾಲ್ಕು ತಿಂಗಳ ನಂತರ ಜಿ.ಎಸ್. ಶಿವರುದ್ರಪ್ಪ ಅವರ ಅಧ್ಯಕ್ಷತೆಯಲ್ಲಿ ಶಿವಮೊಗ್ಗದಲ್ಲಿ ಒಕ್ಕೂಟದ ಸಭೆ ಸೇರಿತ್ತು. ಆಗ ಲಂಕೇಶ್ ಅವರು ಒಕ್ಕೂಟದ ಮುಖವಾಣಿಯಾಗಿ ಒಂದು ಪತ್ರಿಕೆ ಬೇಕಾಗಿದ್ದು, ಆ ಜವಾಬ್ದಾರಿಯನ್ನು 'ಸಂಕ್ರಮಣ' ಹೊರಬೇಕು ಎಂದು ಸೂಚಿಸಿದರು. ಚಂಪಾ ಒಪ್ಪಿದರು, 'ಸಿಪ' ವಿರೋಧಿಸಿದರು; ಜಾತ್ಯತೀತ ಮತ್ತು ವೈಚಾರಿಕ ಮನೋಧರ್ಮದ ಬ್ರಾಹ್ಮಣ ಲೇಖಕರನ್ನು ದೂರ ತಳ್ಳುವುದು ಸರಿಯಲ್ಲವೆಂಬುದು ಅವರ ಅಭಿಪ್ರಾಯವಾಗಿತ್ತು. 1975ರಲ್ಲಿ ಪಟ್ಟಣಶೆಟ್ಟರು 'ಸಂಕ್ರಮಣ'ದಿಂದ ಹೊರಬಂದರು. ಗಿರಡ್ಡಿಯವರೂ ಇದೇ ವೇಳೆಯಲ್ಲಿ ಹೊರಬಿದ್ದರು. ಪತ್ರಿಕೆಯಿಂದ ಹೊರಬಂದರೂ, 'ಸಿಪ' ಕೊನೆಯವರೆಗೂ ಸಂಕ್ರಮಣದ ಚಂದಾ ಕೊಡುತ್ತಿದ್ದರು.

2002ರಲ್ಲಿ 'ಸಿಪ' ಅವರು ತಮ್ಮ ಮತ್ತು ಹೇಮಾ ಪಟ್ಟಣಶೆಟ್ಟರ ಸಂಪಾದಕತ್ವದಲ್ಲಿ 'ಸಂಕಲನ' ದ್ವೈಮಾಸಿಕವನ್ನು ಪ್ರಾರಂಭಿಸಿ, ಮತ್ತೊಂದು ಹಂತದ ಸಾಹಿತ್ಯಿಕ ಚರ್ಚೆಗೆ ನಾಂದಿ ಹಾಡಿದರು. ಅದು ಕೂಡ ಕ್ರಮೇಣ ಚಂದಾದಾರರನ್ನು ಸಂಪಾದಿಸಿಕೊಂಡು ಕನ್ನಡ ಸಾಹಿತ್ಯ ಲೋಕದ ಪ್ರಮುಖ ವಿಷಯಗಳ ಮಾತುಕತೆಗೆ ವೇದಿಕೆ ಆಯಿತು. ಸಾಹಿತ್ಯ ಲೇಖನ ಸರಣಿಗಳು, ಕಥೆ, ಕವಿತೆಗಳು, ವೈಚಾರಿಕ ಲೇಖನಗಳು, ನಿರಂತರ ಪುಸ್ತಕ ವಿಮರ್ಶೆಗಳು ಪ್ರಕಟವಾಗುತ್ತಾ ಹೊಸ ಮತ್ತು ಹಳೆ ತಲೆಮಾರಿನ ಲೇಖಕರಿಗೆ ಅಭಿವ್ಯಕ್ತಿ ಮಾಧ್ಯಮ ದೊರೆತಂತಾಯಿತು.

ಇದುವರೆಗೆ ಸಿಪ ಅವರ ವಿವಿಧ ಪ್ರಕಾರದ ಒಟ್ಟು 135 ಕೃತಿಗಳು ಪ್ರಕಟವಾಗಿವೆ. ಪಟ್ಟಣಶೆಟ್ಟರು ಇದುವರೆಗೆ ಪ್ರಕಟಿಸಿದ ಕವನಸಂಕಲನಗಳ ಸಂಖ್ಯೆ ಇಪ್ಪತ್ತು. ಇದು ಯಾವುದೇ ಒಬ್ಬ ಬರಹಗಾರ ತನ್ನ ಜೀವಮಾನದುದ್ದಕ್ಕೂ ಕಾವ್ಯ ಬರವಣಿಗೆಯಲ್ಲಿ ಮಾಡಬಹುದಾದ ಮಹತ್ಸಾಧನೆಯಾಗಿದೆ.

'ನೀನಾ', 'ಔರಂಗಜೇಬ ಮತ್ತು ಇತರೆ ಕವನಗಳು', 'ಪರದೇಶಿ ಹಾಡುಗಳು', 'ನೂರಾರು ಪದ್ಯಗಳು',